ಕರ್ನಾಟಕ ಸರ್ಕಾರ

# ಭ್ರಷ್ಟಾಚಾರ ನಿಗ್ರಹ ದಳ

ದಿನಾಂಕ: 18.12.2018

## ಪತ್ರಿಕಾ ಪ್ರಕಟಣೆ

ಬೆಂಗಳೂರು ನಗರದ ನಿವಾಸಿಯೊಬ್ಬರು ಮಸಾಲೆ ಪುಡಿಯನ್ನು ತಯಾರು ಮಾಡುವ ಸಣ್ಣ ಉದ್ಯಮವನ್ನು ಪ್ರಾರಂಭಿಸಲು ಪರವಾನಿಗೆ ಪಡೆಯುವ ಸಲುವಾಗಿ ಆಹಾರ ಸುರಕ್ಷತಾ ಮತ್ತು ಗುಣಮಟ್ಟ ಇಲಾಖೆಗೆ (ಎಫ್.ಎಸ್.ಎಸ್.ಎ.ಐ) ಅನ್ ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಿಕೊಂಡಿರುತ್ತಾರೆ. ಶ್ರೀ.ಉಲ್ಲಾಸ್,ಬಿ.ಗಂಗನಹಳ್ಳಿ ಆಹಾರ ಸುರಕ್ಷತಾ ಅಧಿಕಾರಿ, ಜಿಲ್ಲಾ ಅಂಕಿತಾಧಿಕಾರಿಗಳ ಕಛೇರಿ, ಪಿ.ಹೆಚ್.ಐ ಆವರಣ, ಶೇಷಾದ್ರಿ ರಸ್ತೆ, ಬೆಂಗಳೂರು ಇವರು ಅರ್ಜಿದಾರರ ಪರವಾನಿಗೆ ನೀಡುವ ಸಲುವಾಗಿ ರೂ.5,000/- ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ.

ದಿನಾಂಕ:18-12-2018 ರಂದು ಶ್ರೀ.ಉಲ್ಲಾಸ್,ಬಿ.ಗಂಗನಹಳ್ಳಿ, ಆಹಾರ ಸುರಕ್ಷತಾ ಅಧಿಕಾರಿ ರವರು ದೂರುದಾರರಿಂದ ರೂ.5,000/- ಲಂಚದ ಹಣವನ್ನು ಸ್ವೀಕರಿಸುತ್ತಿದ್ದ ಸಂದರ್ಭದಲ್ಲಿ ಭ್ರಷ್ಟಾಚಾರ ನಿಗ್ರಹ ದಳ ಬೆಂಗಳೂರು ನಗರ ಠಾಣೆಯ ಅಧಿಕಾರಿಗಳು ನಡೆಸಿದ ಕಾರ್ಯಾಚರಣೆಯಲ್ಲಿ ಸಿಕ್ಕಿಬಿದ್ದಿರುತ್ತಾರೆ. ಶ್ರೀ.ಉಲ್ಲಾಸ್,ಬಿ.ಗಂಗನಹಳ್ಳಿ ರವರನ್ನು ಶೋಧಿಸಲಾಗಿ ಅವರ ಬಳಿ ರೂ.90,000/- ಸಿಕ್ಕಿದ್ದು ಈ ಹಣಕ್ಕೆ ಸಂಬಂಧಿಸಿದಂತೆ ಸೂಕ್ತ ದಾಖಲೆಗಳನ್ನು ಒದಗಿಸದ ಕಾರಣ ಲಂಚದ ಹಣದ ಸಮೇತ ಸದರಿ ಮೊತ್ತವನ್ನು ಅಮಾನತ್ತು ಪಡಿಸಿಕೊಳ್ಳಲಾಗಿದೆ. ಆಪಾದಿತರನ್ನು ದಸ್ತಗಿರಿ ಮಾಡಿದ್ದು ಪ್ರಕರಣದ ತನಿಖೆ ಮುಂದುವರೆದಿದೆ.